# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ. 192 /2022

P.W:2
C.W:2

**ದಿನಾಂಕ 26.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಹೆಸರು** : ಮಂಜುನಾಥ

**ತಂದೆಯ ಹೆಸರು :** ಮಹದೇವ

**ವಯಸ್ಸು** : 25 ವರ್ಷ

**ವೃತ್ತಿ** ಗಾರೆ ಕೆ ಲಸ

**ವಾಸಸ್ಥಳ** : ಕುರುಡಿ ಗ್ರಾಮ, ರಾಯಚೂರು

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಮೃತ ದೊಡ್ಡಲಿಂಗಪ್ಪ ನನ್ನ ತಾಯಿಯ ಸಹೋದರ. ಸಂಬಂದದಲ್ಲಿ ಆತ ನನಗೆ ಮಾವನಾಗಬೇಕು. ಚಾ.ಸಾ.1 ಆತನ ಪತ್ನಿ. ಚಾ.ಸಾ.1 ನನ್ನ ಅತ್ತೆ. ಚಾ.ಸಾ.3 ಗೊತ್ತು. ಚಾ.ಸಾ.12 ಹನುಮೇಶ ಗೊತ್ತು. ಚಾ.ಸಾ.13- ಸಿದ್ದ ಚಾ.ಸಾ.18- ರೇವಣ್ಣ, ಚಾ.ಸಾ.19- ಮಹೇಶ ಗೊತ್ತು. ಚಾ.ಸಾ.20 ನನ್ನ ಅಜ್ಜಿ, ಮೃತ ದೊಡ್ಡಲಿಂಗಪ್ಪ ರವರ ತಾಯಿ.

2. ನಾನು 5 ವರ್ಷದ ಹಿಂದೆ ಗಾರೆ ಕೆಲಸಕ್ಕಾಗಿ ತುಮಕೂರಿಗೆ ಬಂದಿದ್ದೆನು. ಚಾ,ಸಾ.1, 3, 12, 13, 18, 19 ನನ್ನೊಂದಿಗೆ ತುಮಕೂರಿಗೆ

ಗಾರೆ ಕೆಲಸಕ್ಕೆ ಬಂದಿದ್ದರು. ನಾವೆಲ್ಲರೂ ಬಡ್ಡಿಹಳ್ಳಿಯ ಖಾಲಿ ಜಾಗದಲ್ಲಿ ಗುಡಿಸಲು ಹಾಕಿಕೊಂ ಡು ವಾಸ ಮಾಡುತ್ತಿದ್ದೆವು. ಮೃತ ತನ್ನ ಪತ್ನಿ ಮತುತ ಮಕ್ಕಳೊಂದಿಗೆ ಪ್ರತ್ಯೇಕ ಗುಡಿಸಲಿನಲ್ಲಿ ವಾಸವಾಗಿದ್ದರು. ನನ್ನ ಗುಡಿಸಲು ಆತನ ಗುಡಿಸಲಿನ ಪಕ್ಕದಲ್ಲೇ ಇತ್ತು. ಮೃತ ದೊಡ್ಡಲಿಂಗಪ್ಪ ಕರೇಕಲ್ಲುಪಾಳ್ಯದ ಗೋಶಾಲೆಯಲ್ಲಿ ಹಸು ಮೇಯಿಸಲು ಹೋಗುತ್ತಿದ್ದರು. ಮೃತ ತನ್ನ ಓಡಾಟಕ್ಕೆ ಹೊಂಡಾ ಶೈನ್ ಗಾಡಿಯನ್ನು ಬಳಕೆ ಮಾಡುತ್ತಿದ್ದರು.

3. ದಿ.02.07.2022 ರಂದು ನನ್ನ ಮೃತ ಮಾವ ರಾತ್ರಿ 8.00 ಗಂಟೆಗೆ ಹಾಲು ತರಲು ತನ್ನ ಬೈಕಿನಲ್ಲಿ ಹೋಗಿದ್ದರು ಎಂದು ನನಗೆ ತಿಳಿದು ಬಂತು. ಆತ ವಾಪಸ್ ಬರಲಿಲ್ಲ. ನನ್ನ ಅತ್ತೆ ನನ್ನ ಗುಡಿಸಲಿನ ಬಳಿ ಬಂದು ನನ್ನ ಮೃತ ಮಾವನ ಮೊಬೈಲಿಗೆ ಫೋನ್ ಮಾಡಿದರು. ಆದರೆ ಮೊಬೈಲಿ ಸ್ವಿಚ್ ಆಫ್ ಎಂದು ಬರುತ್ತಿತ್ತು. ನನ್ನ ಅತ್ತೆ ಮತ್ತು ನಾನು ಗೋಶಾಲೆ ಮತ್ತು ಇತರ ಕಡೆಗಳಲ್ಲಿ 3 ದಿನ ನನ್ನ ಮಾವನನ್ನು ಹುಡುಕಾಡಿದೆವು. ನಮ್ಮ ಸಂಬಂಧಿಕರಿಗೆ ಫೋನ್ ಮಾಡಿ ನನ್ನ ಮಾವ ಬಂದಿರುತ್ತಾರ ಎಂದು ವಿಚಾರಿಸಿದೆನು. ಆದರೆ ಸಂಬಂಧಿಕರು ಬಂದಿಲ್ಲ ಎಂದು ತಿಳಿಸಿದರು.

4. ಮೂರು ದಿನದ ನಂತರ ಚಾ.ಸಾ.1 ರವರು ನನ್ನ ಮಾವ ಕಾಣೆಯಾದ ಬಗ್ಗೆ ದೂರು ಕೊಟ್ಟಿದ್ದರು. ನನ್ನ ಮಾವ ಕಾಣೆಯಾದ ನಂತರ ಆತನನ್ನು ನಾನು ಮತ್ತು ಮಲ್ಲೇಶ ಹುಡುಕಾಡುತ್ತಿದ್ದಾಗ 45

ದಿನದ ನಂತರ 1 ಮತ್ತು 2 ನೇ ಅರೋಪಿಗಳು ನನ್ನ ಮಾವನನ್ನು ಕೊಲೆ ಮಾಡಿದ್ದಾರೆ ಎಂದು ಕರೇ ಕಲ್ಲು ಪಾಳ್ಯದ ಜನರು ಮಾತನಾಡಿಕೊಳ್ಳುವ ವಿಚಾರ ನನಗೆ ತಿಳಿಯಿತು. ಸದರಿ ವಿಚಾರವನ್ನು ನಾನು ಚಾ.ಸಾ.1 ರವರಿಗೆ ಹೇಳಿದ್ದೇನೆ. ನನ್ನ ಅತ್ತೆ ಪೋಲೀಸ್ ಠಾಣೆಗೆ 1 ಮತ್ತು 2 ನೇ ಅರೋಪಿಗಳ ಮೇಲೆ ನನ್ನ ಮಾವನನ್ನು ಕೊಲೆ ಮಾಡಿದ್ದ ಬಗ್ಗೆ ದೂರು ಕೊಟ್ಟಿದ್ದರು. ನಾನು ಮತ್ತು ನನ್ನ ಅತ್ತೆಯನ್ನು ಪೋಲೀಸರು ಠಾಣೆಗೆ ಕರಸಿದ್ದರು. ನಾವಿಬ್ಬರೂ ಠಾಣೆಗೆ ಹೋದಾಗ ದೊಡ್ಡಲಿಂಗಪ್ಪರವರನ್ನು ಕೊಲೆಯಾಗಿರುವುದನ್ನು ಪೋಲೀಸರು ತಿಳಿಸಿದರು. ಪೋಲೀಸರು ತಮಗೆ ಸಿಕ್ಕಿದ್ದ ಟವಲ್ ನ್ನು ನಮಗೆ ತೋರಿಸಿದರು. ಸದರಿ ಟವಲ್ ನನ್ನ ಮೃತ ಮಾವನದ್ದು. ಟವಲ್ ರಕ್ತದ ಕಲೆಯಾಗಿತ್ತು. ನನ್ನನ್ನು ಮತ್ತು ನನ್ನ 4-5 ಜನರನ್ನು ಪೋಲೀಸರು ತ್ಯಾಮಗೊಂಡ್ಲು ಬ್ರಿಡ್ ನ ಬಳಿಗೆ ಕರೆದುಕೊಂಡು ಹೋಗಿದ್ದರು. ಪೋಲೀಸರು ನನ್ನ ಬಳಿ ನನ್ನ ಮಾವನ ಮೃತದೇಹವನ್ನು ಬಿಸಾಡಿದ ಸ್ಥಳ ಎಂದು ತೋರಿಸಿದರು. ಅಲ್ಲಿ ಹುಡುಕಾಡಿದಾಗ ಮೃತ ದೇಹ ಸಿಕ್ಕಿರಲಿಲ್ಲ ಆದರೆ ಮೂಳಸಿಗಳು ಸಿಕ್ಕಿದವು.

5. 1 ನೇ ಅರೋಪಿ ಲಕ್ಷ್ಮೀಯ ತಂದೆ ಮತ್ತು ಮೃತ ದೊಡ್ಡ ಲಿಂಗಪ್ಪ ಒಂದೇ ಕಡೆ ಕೆಲಸ ಮಾಡುತ್ತಿದ್ದು, ನನ್ನ ಮಾವ ಆಗಾಗ್ಗೆ ಲಕ್ಷ್ಮೀಯ ತಂದೆಯ ಮನೆಗೆ ಹೋಗುತ್ತಿದ್ದಾಗ ಆಕೆಯ ಪರಿಚಯವಾಯಿತು. 1 ನೇ ಆರೋಪಿ ನನ್ನ ಮಾವನ ಮನೆಗೆ ಮಕ್ಕಳನ್ನು ಶಾಲೆಗೆ ಕರೆದುಕೊಂಡು

ಹೋಗಲು ಆಗಾಗ್ಗೆ ಬರುತ್ತಿದ್ದಳು. ನನ್ನ ಮಾವನ ಬೈಕಿನಲ್ಲಿ 1 ನೇ ಆರೋಪಿ ಆಗಾಗ್ಗೆ ಹೋಗುತ್ತಿದ್ದರು. ಅವರಿಬ್ಬರ ಪರಿಚಯ ಅನೈತಿಕ ಸಂಬಂದಕ್ಕೆ ತಿರುಗಿತು.

6. 2 ನೇ ಆರೋಪಿ ವೆಂಕಟೇಶ್ ಮಾನ್ವಿ ತಾಲ್ಲೂಕಿನ ಸಂಗಾಪುರ ಗ್ರಾಮ ದವರು. ಆತ ಸಹಾ ಕೂಲಿ ಕೆಲಸಕ್ಕೆ ತುಮಕೂರಿಗೆ ನಮ್ಮೊಂದಿಗೆ ಬಂದಿದ್ದರು. ನನ್ನ ಗುಡಿಸಲಿನ ಪಕ್ಕದಲ್ಲಿ ಆತ ಸಹಾ ಗುಡಿಸಲಿನಲ್ಲಿ ವಾಸವಾಗಿದ್ದ. ವೆಂಕಟೇಶ ನ್ನ್ನ ಮಾವನಿಗೆ ಪರಿಚಯ ಇದ್ದ ಕಾರಣ ಆತನನ್ನು 1 ನೇ ಆರೋಪಿ ಲಕ್ಷ್ಮಿಯೊಂದಿಗೆ ನನ್ನ ಮಾವ ಪರಿಚಯ ಮಾಡಿಸಿದರು. 1 ನೇ ಆರೋಪಿ ಮತ್ತು 2 ನೇ ಆರೋಪಿ ಪರಿಚಯದ ನಂತರ ಅವರಿಬ್ಬರ ನಡುವೆ ಅನೈತಿಕ ಸಂಬಂದ ಇತ್ತು. ಸದರಿ ವಿಚಾರ ನನ್ನ ಮಾವನಿಗೆ ತಿಳಿದಿತ್ತು. ಸದರಿ ವಿಚಾರವನ್ನು ನನ್ನ ಮಾವ 1 ನೇ ಆರೋಪಿಯ ತಂದೆಗೆ ತಿಳಿಸಿದರು. 1 ಮತ್ತು 2 ನೇ ಅರೋಪಿಗಳಿಬ್ಬರೂ ಮಾತನಾಡಿಕೊಂಡು , ಅವರಿಬ್ಬರ ಅನೈತಿಕ ಸಂಬಂದದ ವಿಚಾರ 1 ನೇ ಅರೋಪಿಯ ತಂದೆಗೆ ತಿಳಿದಿರುವುದರಿಂದ ಆಕೆಯ ಮನೆಯಲ್ಲಿ ಹಿಂಸೆ ಕೊಡುತ್ತಾರೆ ಎಂದು ಅವರಿಬ್ಬರೂ ಸಹಾ ನನ್ನ ಮಾವನನ್ನು ಕೊಲೆ ಮಾಡಲು ಮಾತನಾಡಿಕೊಂಡಿರತ್ತಾರೆ. ಮೈದಾಳ ರೈಲ್ವೆ ಗೇಟ್‌ನ ಬಳಿ ಅವರಿಬ್ಬರು ನನ್ನ ಮಾವನನ್ನು ಕೊಲೆ ಮಾಡಿರುತ್ತಾರೆ ಎಂದು ತಿಳಿದು ಬಂತು. ನನ್ನ ಗುಡಿಸಲಿನ ಪಕ್ಕದಲ್ಲಿ ವಾಸವಾಗಿದ್ದ ವೆಂಕಟೇಶ ಮತ್ತು

ಮಕಕಳನ್ನು ಕರೆದುಕೊಂಡು ಬರುತ್ತಿದ್ದ ಲಕ್ಷ್ಮಿಯನ್ನು ನೋಡಿದರೆ ಗುರುತಿಸಬಲ್ಲೆ. ವಿಸಿ ಮೂಲಕ ಹಾಜರುಪಡಿಸಿರುವ 1 ಮತ್ತು 2 ನೇ ಆರೊಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈ ಎಲ್ಲಾ ವಿಚಾರಗಳನ್ನು ಪೋಲೀಸರು ನನ್ನನ್ನು ಕರೆಸಿ ವಿಚಾರಣೆ ಮಾಡಿರುತ್ತಾರೆ. ನನ್ನ ಮಾನ ಕೊಲೆಯಾದ ನಂತರ ನಾನು ಮತ್ತು ನನ್ನ ಅತೆ. ಹಾಗೂ ಆಕೆಯ ಮಕ್ಕಳು ಕುರುಡಿ ಗ್ರಾಮಕ್ಕೆ ವಾಪಸ್ ಹೋಗಿರುತ್ತೇವೆ.

**ಪಾಟೀ ಸವಾಲು** ಆರೋಪಿಗಳ ಪರ ವಕೀಲರು ಸಿ.ಡಿಸಿ ರವರು ಚಾ.ಸಾ.1 ಮತ್ತು 2 ರವರ ಪಾಟೀ ಸವಾಲು ಒಟ್ಟಿಗೆ ಮಾಡುವುದಾಗಿ ಆರೋಪಿ ಪರ ವಕೀಲರು ಕೋರಿದ್ದು ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.

**1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**

**ಎಸ್.ಸಿ. ನಂ. 192 /2022**

**ದಿನಾಂಕ 11.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲು ಆರೋಪಿಗಳ ಪರ ಶ್ರೀ .ಎನ್.ಆರ್.ಕೆ. ವಕೀಲರಿಂದ**

7. ನನ್ನ ಮಾವ ಗೋ ಶಾಲೆ ಕೆಲಸಕ್ಕೆ ಹೋಗುತ್ತಿದ್ದರು. ನಾನು, ನನ್ನ ಅತ್ತೆ ನನ್ನೊಂದಿಗೆ ಗಾರೆ ಕೆಲಸಕ್ಕೆ ಹೋಗುತ್ತಿದ್ದೆವು. ನನ್ನೊಂದಿಗೆ ಬಂದಿದ್ದ ಇತರರು ಎಲ್ಲಿಗೆ, ಯಾವ ಕೆಲಸಕ್ಕೆ ಹೋಗುತ್ತಿದ್ದರು ನನಗೆ ಗೊತ್ತಿಲ್ಲ. ನಮ್ಮ ಗುಡಿಸಲಿನಿಂದ ಕರೇಕಲ್ಲು ಗ್ರಾಮದ ಗೋಶಾಲೆಗೆ 2 ಕಿ.ಮೀ ಅಂತರ ಇದೆ. ನನ್ನ ಮಾವನಿಗೆ ಚಾಲನಾ ಪರವಾನಿಗೆ ಇರಲಿಲ್ಲ. ನನ್ನ ಮಾವ ಮೃತರಾಗುವ 10 ವರ್ಷಗಳ ಹಿಂದಿನಿಂದಲೂ ಬೈಕ್ ಚಾಲನೆ ಮಾಡುತ್ತಿದ್ದರು. ಆತ ಚಾಲನೆ ಮಾಡುತ್ತಿದ್ದ ಬೈಕ್ ಯಾವಾಗ ತೆಗೆದುಕೊಂಡರು ನನಗೆ ಗೊತ್ತಿಲ್ಲ. ನನ್ನ ಮಾವನಿಗೆ ಸರಿಯಾಗಿ ಬೈಕ್ ಚಾಲನೆ ಮಾಡಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮಾವ ಕಾಣೆಯಾದ ದಿನ ಸಂಜೆ 6.00 ಗಂಟೆ ಆತ ಕಾಣೆಯಾದ ವಿಚಾರ ನಮಗೆ ತಿಳಿದು ಬಂತು. ನಮ್ಮ ಎಲ್ಲಾ ಸಂಬಂಧಿಕರಿಗೂ ಕರೆ ಮಾಡಿದೆವು. ಈಗ ಅವರ ಹೆಸರುಗಳನ್ನು ಹೇಳಲು ನೆನಪಾಗುತ್ತಿಲ್ಲ. ನಾನು ಯಾವುದೇ ಸಂಬಂಧಿಕರಿಗೆ ಫೋನ್ ಮಾಡಿರಲಿಲ್ಲ ಎಂದರೆ ಸರಿಯಲ್ಲ. ಕಾಣೆಯಾದ

ಬಗ್ಗೆ ದೂರು ಕೊಟ್ಟ ದಿನಾಂಕ ಮತ್ತು ತಿಂಗಳು ಈಗ ನನಗೆ ಹೇಳಲು ಸಾಧ್ಯವಿಲ್ಲ. ನಾನು ಕರೇಕಲ್ಲು ಪಾಳ್ಯ ಕ್ಕೆ ಕೆಲಸಕ್ಕೆ ಹೋಗುತ್ತಿರಲಿಲ್ಲ ನಾನು ಬೇರೆ ಕಡೆ ಕೆಲಸ ಮಾಡುತ್ತಿದ್ದೆ. ಸದರಿ ಗ್ರಾಮದಲ್ಲಿ ನನಗೆ ಪರಿಚಯಸ್ಥರಿಲ್ಲ. ಕರೇಕಲ್ಲು ಗ್ರಾಮದಲ್ಲಿ ಯಾರೋ ನನ್ನ ಮಾವನನ್ನು ಕೊಲೆ ಮಾಡಿದ ವಿಚಾರ ಮಾತನಾಡಿಕೊಳ್ಳುತಿದ್ದರು ಅವರ ಹೆಸರು ನನಗೆ ಗೊತ್ತಿಲ್ಲ. ಕರೇಕಲ್ಲು ಗ್ರಾಮದಲ್ಲಿ ಕೊಲೆ ವಿಚಾರ ಮಾತನಾಡಿಕೊಳ್ಳುತ್ತಿರಲಿಲ್ಲ ಎಂದರೆ ಸರಿಯಲ್ಲ.

8. ಮು.ಮಾ.1 ರೀತಿಯ ಟವಲ್ ಗಳು ಬೇರೆ ಕಡೆ ಸಿಗುತ್ತವೆ. ಧೂಳು ಕೆಸರು ತುಂಬಿದ ವಸ್ತುಗಳು ಯಾರದು ಎಂದು ಗುರುತಿಸಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಮು.ಮಾ.1 ಟವಲ್ ನ್ನು ನಾನು ಗುರುತಿಸಿರಲಿಲ್ಲ ಎಂದರೆ ಸರಿಯಲ್ಲ. ಪೋಲೀಸರು ನನ್ನನ್ನು ಕಾರಿನಲ್ಲಿ ಮೃತದೇಹ ಇತ್ತು ಎಂಬ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದರು. ನಾನು ಸದರಿ ಸ್ಥಳಕ್ಕೆ ಪೋಲೀಸರೊಂದಿಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಸ್ಥಳದಲ್ಲಿ ಮೂಳೆಗಳು ಮತ್ತು ಬುರುಡೆ ನನ್ನ ಮಾವನದು ಅಲ್ಲ ಎಂದರೆ ಸರಿಯಲ್ಲ. ನಾನು ಸದರಿ ಸ್ಥಳಕ್ಕೆ ಹೋಗಿರಲಿಲ್ಲ, ಆ ಸ್ಥಳದಲ್ಲಿ ಯಾವುದೇ ಮೂಳೆಗಳನ್ನು ನೋಡಿರಲಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಲಕ್ಷ್ಮೀಯ ತಂದೆ ಮತ್ತು ಮೃತ ದೊಡ್ಡ ಲಿಂಗಪ್ಪಒಂದೇ ಕಡೆ ಕೆಲಸ ಮಾಡುತ್ತಿದ್ದು, ನನ್ನ ಮಾವ ಆಗಾಗ್ಗೆ ಲಕ್ಷ್ಮಿಯ ತಂದೆಯ ಮನೆಗೆ

ಹೋಗುತ್ತಿದ್ದಾಗ ಆಕೆಯ ಪರಿಚಯವಾಯಿತು, 1 ನೇ ಆರೋಪಿ ನನ್ನ ಮಾವನ ಮನೆಗೆ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗಲು ಆಗಾಗ್ಗೆ ಬರುತ್ತಿದ್ದಳು ಎಂದು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ನಾನು ಸದರಿ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಮಾವ ಮತ್ತು 1 ನೇ ಆರೋಪಿ ನಡುವೆ ಅನೈತಿಕ ಸಂಬಂದ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿ ನಡುವೆ ಅನೈತಿಕ ಸಂಬಂದ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೈದಾಳ ಹೈವೇ ಗೇಟ್ ಬಳಿ ನನ್ನ ಮಾವನವರನ್ನು ಕೊಲೆ ಮಾಡಿರುತ್ತಾರೆ ಎಂದು ತಿಳಿದು ಬಂತು ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಯಾವುದೇ ವಿಚಾರಗಳು ತಿಳಿಯದೇ ಇದ್ದರೂ ಪೋಲೀಸರು ಹೇಳಿ ಕೊಟ್ಟ ಹಾಗೇ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.